# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಯೋಜನಾ ಮಂಡಳಿಯ ಸರ್ಕಾರಿ ವಾಹನಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ ಪಿಡಿ 33 ಎಸ್‌ಪಿಬಿ 2012, ದಿನಾಂಕ: 2.9.2014.
2. ಸರ್ಕಾರಿ ಆದೇಶ ಸಂಖ್ಯೆ: ಪಿಡಿ 22 ಎಸ್‌ಪಿಬಿ 2014, ದಿ: 7.10.2014.
3. ದರಖಾಸ್ತು ಪ್ರಕಟಣೆ ದಿನಾಂಕ30.09.2015.

**ಪ್ರಸ್ತಾವನೆ :**

ರಾಜ್ಯ ಯೋಜನಾ ಮಂಡಳಿಯಲ್ಲಿ ಒಬ್ಬ ವಾಹನ ಚಾಲಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

ರಾಜ್ಯ ಯೋಜನಾ ಮಂಡಳಿಯ ಅಧಿಕೃತ ವಾಹನಕ್ಕೆ ಒಬ್ಬ ವಾಹನ ಚಾಲಕರ ಸೇವೆಯನ್ನು ದಿನಾಂಕ: 7.10.2014ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಮೆ: ಸ್ಟಾರ್ ಎಂಪ್ಲಾಯ್ಮೆಂಟ್ ಬ್ಯೂರೋ, ಬೆಂಗಳೂರು, ಈ ಸಂಸ್ಥೆಯಿಂದ ಪಡೆಯಲು ಮೇಲೆ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದ್ದು, ಹೊರಗುತ್ತಿಗೆ ಆಧಾರದ ಮೇಲೆ ಒಬ್ಬ ವಾಹನ ಚಾಲಕರ ಸೇವೆಯನ್ನು ಪಡೆಯಲು ಉದ್ದೇಶಿಸಿ ಮೇಲೆ ಓದಲಾದ (3)ರ ದರಖಾಸ್ತು ಪ್ರಕಟಣೆಯಲ್ಲಿ ಟೆಂಡರನ್ನು ಕರೆಯಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

| ಸಂಸ್ಥೆಯ ಹೆಸರು | ಸೇವಾ ಶುಲ್ಕ ಸೇವಾ ತೆರಿಗೆ ಮುಂತಾದವುಗಳನ್ನು ಸೇರಿಸಿ ಒಟ್ಟು ಸಂಬಳ | ನಮೂದಿಸಿರುವ ಸೇವಾ ಶುಲ್ಕ | ಒಟ್ಟು ಸಂಬಳಕ್ಕೆ ಶೇಕಡಾವಾರು ನಮೂದಿಸಿರುವ ಮೊತ್ತ |
|---|---|---|---|
| ಮೆ: ಬಿ.ಜಿ. ಎಂಟರ್‌ಪ್ರೈಸಸ್. | – | ರೂ.2086.00/- | 18% |
| ಮೆ: ಶ್ರೀ ವಿನಾಯಕ ಎಂಟರ್‌ಪ್ರೈಸಸ್. | – | ರೂ.1970.00/- | 17% |
| ಮೆ: ಸಂಗೀತ ಸೆಕ್ಯೂರಿಟಿ ಸರ್ವಿಸಸ್. | – | ರೂ.1738.50/- | 15% |
| ಮೆ: ಕರ್ನಾಟಕ ಸೆಕ್ಯೂರಿಟಿ ಫೋರ್ಸ್ ಮತ್ತು ಡಿ ಡಿಟೆಕ್ಟಿವ್. | ರೂ.13,393.67/- | ರೂ.992.12/- | 8% |
| ಮೆ: ಟೀಪಿಕ ಕಾರ್ಪೋರೇಷನ್ | ರೂ.11,591.00/- | ರೂ.753.20/- | 14% |
| ಮೆ: ಸ್ಟಾರ್ ಎಂಪ್ಲಾಯ್ಮೆಂಟ್ | ರೂ.11,584.00/- | ರೂ.460.00/- | 14% |

ಸ್ವೀಕೃತವಾದ ಮೇಲ್ಕಂಡ ಆರು ಸಂಸ್ಥೆಗಳ ದರಪಟ್ಟಿಯನ್ನು ಪರಿಶೀಲಿಸಿದಾಗ ಮೆ: ಸ್ಟಾರ್ ಎಂಪ್ಲಾಯ್ಮೆಂಟ್‌ರವರು ನಮೂದಿಸಿರುವ ದರವು ಇತರೆ ಏಜೆನ್ಸಿರವರು ನಿಗದಿಪಡಿಸಿರುವ ದರಕ್ಕಿಂತ ಕಡಿಮೆ ಇದ್ದು, ಷರತ್ತಿನನ್ವಯ ಸೇವಾ ತೆರಿಗೆ ಮುಂತಾದವನ್ನು ಸೇರಿಸಿ ರೂ.11,590/- ಗಳನ್ನು ಮೀರಿರುವುದಿಲ್ಲ. ಆದಕಾರಣ ಮೆ: ಸ್ಟಾರ್ ಎಂಪ್ಲಾಯ್ಮೆಂಟ್ ಸಂಸ್ಥೆರವರನ್ನು ಆಯ್ಕೆ ಮಾಡಲಾಗಿರುತ್ತದೆ.

ಅದರಂತೆ ಈ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ ಪಿಡಿ 68 ಎಸ್‌ಪಿಬಿ 2015
## ಬೆಂಗಳೂರು, ದಿನಾಂಕ: 23.11.2015

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಹಿನ್ನೆಲೆಯಲ್ಲಿ ಸಂಶೋಧನಾ ಸಮಾಲೋಚಕರು, ರಾಜ್ಯ ಯೋಜನಾ ಮಂಡಳಿ, ಇವರಿಗೆ ಒದಗಿಸಲಾದ ರಾಜ್ಯ ಯೋಜನಾ ಮಂಡಳಿಯ ಅಧಿಕೃತ ಸರ್ಕಾರಿ ವಾಹನಕ್ಕೆ ಒಬ್ಬ ವಾಹನ ಚಾಲಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ದಿನಾಂಕ: 1ನೇ ಡಿಸೆಂಬರ್ 2015ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನುಬಂಧದಲ್ಲಿ ತೋರಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮೆ: ಸ್ಟಾರ್ ಎಂಪ್ಲಾಯ್ಮೆಂಟ್ ಬ್ಯೂರೋ, ನಂ.8/1, 8ನೇ ಮುಖ್ಯ ರಸ್ತೆ, GEO ಹೋಟೆಲ್ ರಸ್ತೆ ಎದುರು, ಸಂಪಂಗಿರಾಮನಗರ, ಬೆಂಗಳೂರು - 560 027, ಇವರಿಂದ ಪಡೆಯಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ ಆಯವ್ಯಯ ಲೆಕ್ಕ ಶೀರ್ಷಿಕೆ "3451-00-101-4-00 (ಯೋಜನೇತರ)" ದಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ: 17.5.1997ರ ಸರ್ಕಾರದ ಆದೇಶ ಸಂಖ್ಯೆ: ಪಿಡಿ 113 ಎಸ್‌ಪಿಎಂ 96 ರಲ್ಲಿ ರಾಜ್ಯ ಯೋಜನಾ ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ
22032623

ಇವರಿಗೆ:

1. ಮಹಾಲೇಖಪಾಲರು, (A&E/AU-I, II,) ಕರ್ನಾಟಕ, ಬೆಂಗಳೂರು.
2. ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು -2 ರವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-6).
6. ಸರ್ಕಾರದ ಅಧೀನ ಕಾರ್ಯದರ್ಶಿ (1 ಮತ್ತು 2), ಯೋಜನಾ ಇಲಾಖೆ – ಕಂಪೆಂಡಿಯಂಗಾಗಿ.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸಹಾಯಕ ಲೆಕ್ಕಾಧಿಕಾರಿ, ಎಸ್-3 ಶಾಖೆ, ರಾಜ್ಯ ಯೋಜನಾ ಮಂಡಳಿ.
9. ವ್ಯವಸ್ಥಾಪಕರು, ಮೆ: ಸ್ಟಾರ್ ಎಂಪ್ಲಾಯ್ಮೆಂಟ್ ಬ್ಯೂರೋ, ನಂ.8/1, 8ನೇ ಮುಖ್ಯ ರಸ್ತೆ, GEO ಹೋಟೆಲ್ ರಸ್ತೆ ಎದುರು, ಸಂಪಂಗಿರಾಮನಗರ, ಬೆಂಗಳೂರು – 560 027.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

320

<u>ಸರ್ಕಾರಿ ಆದೇಶ ಸಂಖ್ಯೆ ಪಿಡಿ 68 ಎಸ್‌ಪಿಬಿ 2015, ದಿನಾಂಕ: 23.11.2015 ಕ್ಕೆ ಅನುಬಂಧ</u>

## ಷರತ್ತು ಮತ್ತು ನಿಬಂಧನೆಗಳು

1. ವಾಹನ ಚಾಲಕರು ಚಾಲ್ತಿಯಲ್ಲಿರುವ ಅಧಿಕೃತ ಡ್ರೈವಿಂಗ್ ಲೈಸನ್ಸ್ ಹೊಂದಿರತಕ್ಕದ್ದು.

2. ತುರ್ತು ಕಛೇರಿ ಕೆಲಸಗಳ ಮೇರೆಗೆ ರಜಾ ದಿವಸವೂ ಸೇವೆ ಸಲ್ಲಿಸಲು ಬದ್ಧರಿರತಕ್ಕದ್ದು.

3. ಅಧಿಕಾರಿಗಳ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

4. ಚಾಲಕರು ಕರ್ತವ್ಯದಲ್ಲಿರುವಾಗ ಶುಚಿಯಾದ ಸಮವಸ್ತ್ರದಲ್ಲಿರತಕ್ಕದ್ದು.

5. ವಾಹನವನ್ನು ವಿವೇಚನೆಯಿಂದ ಸೂಕ್ತ ರೀತಿಯಲ್ಲಿ ಉತ್ತಮವಾಗಿ ಚಾಲನೆ ಮಾಡತಕ್ಕದ್ದು.

6. ವಾಹನದಲ್ಲಿರುವ ಎಲ್ಲಾ ಸಲಕರಣೆ / ಉಪಕರಣಗಳನ್ನು ಹಾಳಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳತಕ್ಕದ್ದು.

7. ವಾಹನವು ಕ್ರಮಿಸಿದ ದೂರವನ್ನು ಲಾಗ್ ಪುಸ್ತಕದಲ್ಲಿ ಯಥೋಚಿತವಾಗಿ ನಮೂದಿಸತಕ್ಕದ್ದು.

8. ನೂರು ರೂಪಾಯಿ ಮುಖ ಬೆಲೆಯುಳ್ಳ ಛಾಪಾ ಕಾಗದದಲ್ಲಿ ಒಡಂಬಡಿಕೆಯ ಪತ್ರವನ್ನು ಬರೆದುಕೊಡತಕ್ಕದ್ದು.

9. ಸಂಸ್ಥೆಯಿಂದ ಪಡೆಯಲಾದ ವಾಹನ ಚಾಲಕರ ಸೇವೆಯನ್ನು ಯಾವುದೇ ಮುನ್ಸೂಚನೆಯಿಲ್ಲದೆ ಹಾಗೂ ಯಾವುದೇ ಕಾರಣವನ್ನು ನೀಡದೆ ರದ್ದುಗೊಳಿಸುವ ಹಕ್ಕನ್ನು ಕಾರ್ಯದರ್ಶಿಗಳು ಮತ್ತು ಸದಸ್ಯ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಇವರು ಅಥವಾ ಇವರು ಸೂಚಿಸಿದ ಯಾವುದೇ ಅಧಿಕಾರಿಯು ಹೊಂದಿರುತ್ತಾರೆ.

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.